**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ ನಂ : 35/2018**

**ಚಾ.ಸಾಃ 2, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ನಾರಾಯಣ ಹೆಗಡೆ |
| ತಂದೆಯ ಹೆಸರು | ಸೀತಾರಾಮ |
| ವಯಸ್ಸು | 71 ವರ್ಷಗಳು |
| ಉದ್ಯೋಗ | ರೈತಾಬಿ |
| ವಾಸ್ತವ್ಯ | ಸಾಲ್ಕೋಡ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 13-11-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 15-11-2016 ರಂದು ಪೋಲೀಸರು ಅರೆಅಂಗಡಿಯ ಕರಿಕಾನ ಪರಮೇಶ್ವರ ವ್ಯವಸಾಯ ಸೇವಾ ಸಂಘಕ್ಕೆ ಭೇಟಿ ನೀಡಿ ನನ್ನನ್ನು ಕರೆಸಿ ನೀವು ಇದೇ ಊರಿನವರಾ ಎಂದು ಕೇಳಿದರು, ನಾನು ಹೌದು ಎಂದು ಹೇಳಿರುತ್ತೇನೆ. ನಂತರ ಅಧ್ಯಕ್ಷರು ಗೊತ್ತಾ ಅಂತ ಕೇಳಿದರು, ಗೊತ್ತು ಎಂದು ಹೇಳಿದ್ದೇನೆ. ನಂತರ ಪೋಲೀಸರು ಸೊಸೈಟಿಯಲ್ಲಿ ಚೆಕ್ ಕಳ್ಳತನ ಆಗಿರುವ ಬಗ್ಗೆ ವಿಷಯ ತಿಳಿದರು. ಜಾಗವನ್ನು ಪರಿಶೀಲಿಸಿದರು, ನಂತರ ಪಂಚನಾಮೆಗೆ ನಾನು ಸಹಿ ಹಾಕಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ದಿನಾಂಕ 26-12-2016 ರಂದು ಪುನಃ ಪೋಲೀಸರು ನನ್ನನ್ನು ಕೆಡಿಸಿಸಿ ಬ್ಯಾಂಕಗೆ ಬರಲು ತಿಳಿಸಿದ್ದು ಅದರಂತೆ ಹೋಗಿದ್ದಾಗ ಪೋಲೀಸರು ಸೊಸೈಟಿಯಲ್ಲಿ ಕಳುವಾಗಿದ್ದ ಚೆಕನ್ನು ಮ್ಯಾನೇಜರವರ ಸಮಕ್ಷಮ ತೋರಿಸಿ ಪಂಚನಾಮೆ ಮಾಡಿ ನನ್ನ ಸಹಿ ತೆಗೆದುಕೊಂಡು ಒಂದು ಫೋಟೋ ತೆಗೆಸಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-6 ಎಂದು, ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಆ ದಿನ ಪೋಲೀಸರು ಅಮಾನತ್ತುಪಡಿಸಿಕೊಂಡ ಚೆಕ್ಕನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಿಪಿ-3 ರ ಚೆಕ್ಕನ್ನು ನೋಡಿ ಗುರುತಿಸಿರುತ್ತಾರೆ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ದಿನಾಂಕಃ 21-12-2016 ರಂದು ಸದರಿ ಪಂಚನಾಮೆ ಮಾಡಿ ನಿಪಿ-3 ರ ಚೆಕ್ಕನ್ನು ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಎಸ್. ಜಿ. ಹೆಗಡೆಯವರಿಂದಃ</u>**

ನಾನು ಅರೆಅಂಗಡಿಯ ಸೊಸೈಟಿಗೆ 3 ಬಾರಿ ನಿರ್ದೇಶಕನಾಗಿದ್ದೆ. ನನ್ನ ಅವಧಿಯಲ್ಲಿಯೂ ಸಹ ಆ ಕಾಲದ ಕಾರ್ಯದರ್ಶಿಗಳು ಅವ್ಯವಹಾರ ಮಾಡಿದ್ದರು. 2016ರ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ನಾನು ಹಾಜರಾಗಿದ್ದೆ. ಪಂಚನಾಮೆಯ ಕಾಲಕ್ಕೆ ನನಗೆ ಯಾವುದೇ ಸಿಸಿ ಕ್ಯಾಮರಾದ ವಿಡಿಯೋಗಳನ್ನು ತೋರಿಸಿಲ್ಲ. ಪಂಚನಾಮೆ ಕಾಲಕ್ಕೆ ಸಿಸಿ ಕ್ಯಾಮರಾ ಇತ್ತು. ಪೋಲಿಸರು ಸ್ಥಳ ಪಂಚನಾಮೆಗೆ ಬರುವ ಮೊದಲು ಕಾರ್ಯದರ್ಶಿ ಸೊಸೈಟಿಯಲ್ಲಿ ಅವ್ಯವಹಾರ ಮಾಡಿದ್ದಾರೆ ಅಂತ ಜನರಿಗೆಲ್ಲ ಪ್ರಚಾರ ಆಗಿತ್ತು ಎಂದರೆ  ಸರಿ. ಸ್ಥಳ ಪಂಚನಾಮೆ ಕಾಲಕ್ಕೆ ನನಗೆ ಹಾಜರಾತಿ ಪುಸ್ತಕವನ್ನು ತೋರಿಸಲಿಲ್ಲ. ಚಾಸಾ-1 ರವರ ಮನೆ ನಮ್ಮ ಮನೆಯಿಂದ ಒಂದು ಕಿಲೋಮೀಟರ್ ದೂರದಲ್ಲಿದೆ. ಆತ ಊರಿನವರಾಗಿರುವುದರಿಂದ ಪರಿಚಯ ಇದ್ದಾರೆ. ಹಾಲಿ ಕಾರ್ಯದರ್ಶಿ ನನಗೆ ಪರಿಚಯ. ಕಾರ್ಯದರ್ಶಿಗೆ ಸಹಾಯ ಆಗುವಂತೆ ಪಂಚನಾಮೆಯನ್ನು ಸೃಷ್ಟಿಸಲು ನಾನು ಸಹಾಯ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು, ಚಾಸಾ-1 ಮತ್ತು ಉಳಿದ ಪಂಚರು ಒಂದೇ ಊರಿನವರು ಎಂದರೆ ಸರಿ. ಯಾವುದೇ ಬ್ಯಾಂಕಿಗೆ ಹೋಗಿ ಯಾವುದೇ ಪಂಚನಾಮೆ ಮಾಡಿಲ್ಲ ಸೊಸೈಟಿಯಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**